# ಮಾಸ ಭವಿಷ್ಯ

–ಅರುಣ ಪಿ. ಭಟ್



**ಮೇಷ:** ನಿಮಗೆ ಸ್ವಲ್ಪಮಟ್ಟಿನ ಹಣ ನಷ್ಟವಾಗುವ ಸಾಧ್ಯತೆ ಇದೆ. ನೀವು ನಿಮ್ಮ ಆರೋಗ್ಯದ ಮೇಲೆ ಹಣವನ್ನು ವ್ಯಯಿಸಬೇಕಾಗುತ್ತದೆ. ಉದ್ಯೋಗದಲ್ಲಿ ಪ್ರತಿಕೂಲ ಪರಿಸ್ಥಿತಿಗಳು ಮಾನಸಿಕ ಒತ್ತಡವನ್ನುಂಟು ಮಾಡಬಹುದು. ವ್ಯಾಪಾರಸ್ಥರಿಗೆ ಉತ್ತಮ ಸಮಯ. ಶುಭ: 11,19,29. ಅಶುಭ: 15,17,28.

**ವೃಷಭ:** ಸರ್ಕಾರಿ ಕೆಲಸದಲ್ಲಿರುವವರಿಗೆ ಕೆಲಸದಲ್ಲಿ ಹಿಂಬಡ್ತಿ. ಮೇಲಧಿಕಾರಿಗಳಿಂದ ಕಿರಿಕಿರಿ. ವಿದ್ಯಾರ್ಥಿಗಳಿಗೆ ಈ ತಿಂಗಳು ಅನುಕೂಲಕರವಾಗಿದೆ ಮತ್ತು ಅವರು ವಿದೇಶಿ ವಿಶ್ವವಿದ್ಯಾಲಯದಲ್ಲೂ ಪ್ರವೇಶ ಪಡೆಯಬಹುದು. ಆರ್ಥಿಕ ಬಿಕ್ಕಟ್ಟನ್ನು ಎದುರಿಸಬೇಕಾಗಬಹುದು. ಶುಭ: 10,16,26. ಅಶುಭ: 11,17,29.





**ಮಿಥುನ:** ಈ ತಿಂಗಳು ನಿಮ್ಮ ಕೆಲಸದಲ್ಲಿ ಯಶಸ್ಸನ್ನು ಪಡೆಯುವಿರಿ ಮತ್ತು ಹಣದ ಪ್ರಯೋಜನವನ್ನು ಪಡೆಯುವಿರಿ. ನೀವು ಮಾಡುವ ಯಾವುದೇ ಕೆಲಸದಲ್ಲಿ ನಿಮ್ಮ ಉತ್ತಮ ಕಾರ್ಯಕ್ಷಮತೆಯನ್ನು ಮುಂದುವರಿಸಿ, ಪರಿಶ್ರಮದ ಫಲಿತಾಂಶ ಸಿಗುತ್ತದೆ. ಶುಭ: 9,12,22. ಅಶುಭ: 14,18,25.

**ಕರ್ಕ:** ಕುಟುಂಬ ಜೀವನ ಉತ್ತಮವಾಗಿರಲಿದೆ. ತಿಂಗಳ ಆರಂಭ ಮತ್ತು ಅಂತ್ಯದಲ್ಲಿ ನೀವು ಉತ್ತಮ ಫಲಿತಾಂಶ ಪಡೆಯುತ್ತೀರಿ. ಆರ್ಥಿಕವಾಗಿ ಅನಿಶ್ಚಿತತೆ ಇದ್ದರೂ ಸ್ಥಿರವಾದ ಪ್ರಗತಿಯೊಂದಿಗೆ ನೆಮ್ಮದಿಯಾಗಿರುವಿರಿ. ವಿದ್ಯಾರ್ಥಿಗಳಿಗೆ ಯಶಸ್ಸು. ಶುಭ: 10,16,24. ಅಶುಭ: 11,18,29.





**ಸಿಂಹ:** ನಿಮ್ಮ ಜೀವನದಲ್ಲಿ ಅನೇಕ ಸವಾಲುಗಳು ಬರುತ್ತವೆ. ಇದರಿಂದ ನೀವು ತೊಂದರೆಗೊಳಗಾಗಬಹುದು. ನೀವು ಉದ್ಯೋಗದಲ್ಲಿದ್ದರೆ ಕೆಲಸದ ಸ್ಥಳದಲ್ಲಿ ನೀವು ಉತ್ತಮ ಸ್ಥಾನ ಪಡೆಯುತ್ತೀರಿ. ನಿಮ್ಮ ಸಾಧನೆಗೆ ಹಿರಿಯ ಅಧಿಕಾರಿಗಳು ಸಂತೋಷ ಪಡುತ್ತಾರೆ. ಶುಭ: 10,18,29. ಅಶುಭ: 13,25,27.

**ಕನ್ಯಾ:** ಮನೆಗೆ ಅನುಗುಣವಾಗಿ ಖರ್ಚು– ವೆಚ್ಚ ಮಾಡುವಿರಿ. ಇದರಿಂದ ಮನೆಯ ಸದಸ್ಯರ ನಡುವೆ ನಿಮ್ಮ ಗೌರವ ಹೆಚ್ಚುತ್ತದೆ. ಯಾವುದಾದರೂ ಶುಭ ಸುದ್ದಿ ಕೇಳುವ ಸಾಧ್ಯತೆ ಇದೆ. ಸಹೋದ್ಯೋಗಿಯ ಸಹಾಯದಿಂದ ಅನೇಕ ಅವಕಾಶಗಳನ್ನು ಪಡೆಯುತ್ತೀರಿ. ಶುಭ: 11,18,29. ಅಶುಭ: 9,17,27.





**ತುಲಾ:** ನೀವು ನಿಮ್ಮ ಉದ್ಯೋಗವನ್ನು ಬದಲಾಯಿಸುವ ಬಗ್ಗೆ ಯೋಚಿಸುತ್ತಿದ್ದರೆ ಆ ಬಗ್ಗೆ ಪ್ರಯತ್ನವನ್ನು ವೇಗಗೊಳಿಸಿ. ಯಶಸ್ವಿಯಾಗುವಿರಿ. ನಿಮ್ಮ ವೆಚ್ಚಗಳನ್ನು ನಿಯಂತ್ರಿಸುವ ಅಗತ್ಯವಿದೆ. ಇಲ್ಲದಿದ್ದರೆ ಭವಿಷ್ಯದಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗಬಹುದು. ಶುಭ: 11,17,28. ಅಶುಭ: 16,19,29.

**ವೃಶ್ಚಿಕ:** ನಿಮ್ಮ ಆರ್ಥಿಕ ಜೀವನವು ಉತ್ತಮವಾಗಿರಲಿದೆ. ಹೊಸ ವಾಹನ ಅಥವಾ ಮನೆ ಖರೀದಿಸುವ ನಿರ್ಧಾರ ತೆಗೆದುಕೊಳ್ಳಬಹುದು. ನ್ಯಾಯಾಲಯದಲ್ಲಿ ನಿಮ್ಮ ಪರ ತೀರ್ಪು ಬರುವ ಸಾಧ್ಯತೆ ಇದೆ. ಒತ್ತಡ ಮುಕ್ತರಾಗಿ ಸಂತಸ ಅನುಭವಿಸುವಿರಿ. ಶುಭ: 11,16,26. ಅಶುಭ: 10,15,27.





**ಧನು:** ನೀವು ಕಠಿಣ ಪರಿಶ್ರಮ ಮಾಡಬೇಕಾಗುತ್ತದೆ. ಆಗ ಮಾತ್ರ ನೀವು ಅಪೇಕ್ಷಿತ ಫಲಿತಾಂಶ ಪಡೆಯಲು ಸಾಧ್ಯ. ಅನೇಕ ಹೊಸ ಹೂಡಿಕೆದಾರರು ನಿಮ್ಮೊಂದಿಗೆ ವ್ಯಾಪಾರ ಮಾಡುವರು. ವಿದೇಶಕ್ಕೆ ಹೋಗಲು ಅವಕಾಶವಿದೆ. ತಾಯಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಶುಭ: 12,20,24. ಅಶುಭ: 11,17,22.

**ಮಕರ:** ವಾಹನ ಚಲಾಯಿಸುವ ಸಮಯದಲ್ಲಿ ಹೆಚ್ಚು ಜಾಗರೂಕರಾಗಿರಬೇಕು. ತಿಂಗಳ ಮಧ್ಯದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಅನೇಕ ವಿಶೇಷ ಕಷ್ಟ ಎದುರಿಸಬೇಕಾಗುತ್ತದೆ. ಉದ್ಯೋಗಿಗಳಿಗೆ ವಿದೇಶ ಪ್ರಯಾಣದ ಅವಕಾಶ. ಶುಭ: 12,19,22. ಅಶುಭ: 10,17,26.





**ಕುಂಭ:** ಕುಟುಂಬದ ಎಲ್ಲಾ ಸದಸ್ಯರಲ್ಲಿ ಸಹೋದರತ್ವ ಮತ್ತು ಒಗ್ಗಟ್ಟು ಹೆಚ್ಚಾಗುತ್ತದೆ. ನಿಮ್ಮ ತಂದೆತಾಯಿಯ ಜೊತೆ ತೀರ್ಥ ಕ್ಷೇತ್ರದರ್ಶನ ಮಾಡುವಿರಿ. ಕೆಲಸದಲ್ಲಿ ಯಶಸ್ಸು ಪಡೆಯುವಿರಿ. ನಿಮ್ಮ ಸಹೋದ್ಯೋಗಿಗಳು ಮತ್ತು ನಿಮ್ಮ ಹಿರಿಯ ಅಧಿಕಾರಿಗಳಿಂದ ಬೆಂಬಲ ಸಿಗಲಿದೆ. ಶುಭ: 10,16,23. ಅಶುಭ: 11,19,28.

**ಮೀನ:** ನಿಮ್ಮ ಕುಟುಂಬ ಜೀವನದಲ್ಲಿ ಅನೇಕ ಬದಲಾವಣೆ ಎದುರಿಸಬೇಕಾಗುತ್ತದೆ. ನಿಮ್ಮ ತಾಯಿಯ ಆರೋಗ್ಯ ಸಮಸ್ಯೆ ಬರುವ ಸಾಧ್ಯತೆ ಇದೆ. ಅಂತಹ ಪರಿಸ್ಥಿತಿಯಲ್ಲಿ ಮಾನಸಿಕ ಚಿಂತೆಗಳು ನಿಮ್ಮನ್ನು ಕಾಡುತ್ತವೆ. ಆರೋಗ್ಯದಲ್ಲಿ ಸಣ್ಣ ಮಟ್ಟಿಗೆ ಏರುಪೇರಾಗುವ ಸಾಧ್ಯತೆ. ಶುಭ: 11,18,26. ಅಶುಭ: 12,16,22.

